# ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1032
ಸದಸ್ಯರ ಹೆಸರು : ಶ್ರೀ ವೈ ಎಂ ಸತೀಶ್
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ :18.12.2024

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿರುವ ನಗರ ಸಾರಿಗೆ ಬಸ್‌ಗಳ ಸಂಖ್ಯೆಯೆಷ್ಟು; ಈ ಬಸ್‌ಗಳಿಗೆ ಪ್ರತಿ ತಿಂಗಳು ಬಳಸುವ ಡೀಸಲ್ ಎಷ್ಟು; ನಗರ ಸಾರಿಗೆಯಿಂದ ಬರುವ ಆದಾಯವೆಷ್ಟು; ನಗರ ಸಾರಿಗೆ ಬಸ್‌ಗಳು ಡೀಸಲ್, ಇಂಧನದಿಂದ ಕ್ರಮಿಸುವುದರಿಂದ ನಷ್ಟ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಒಟ್ಟು 60 ನಗರ ಸಾರಿಗೆ ಬಸ್ಸುಗಳನ್ನು ಕಾರ್ಯಾಚರಣೆ ಗೊಳಿಸಲಾಗುತ್ತಿದೆ. ಸದರಿ ಬಸ್ಸುಗಳಿಗೆ ಪ್ರತಿ ತಿಂಗಳು ರೂ.19.76 ಲಕ್ಷದಷ್ಟು ಡೀಸೆಲ್ ವೆಚ್ಚವಾಗುತ್ತಿದ್ದು, ಪ್ರತಿ ತಿಂಗಳು ರೂ.61.48 ಲಕ್ಷದಷ್ಟು ಸಾರಿಗೆ ಆದಾಯ ಗಳಿಸಲಾಗುತ್ತಿದೆ.<br><br>ಇದಲ್ಲದೇ ಇನ್ನಿತರೆ ವೆಚ್ಚಗಳಾದ ಬಿಡಿಭಾಗಗಳು, ಟಯರ್-ಟ್ಯೂಬ್, ಕೀಲೆಣ್ಣೆ, ವಿದ್ಯುತ್ ಕೋಶ ಮತ್ತು ವಿದ್ಯುತ್ ಉಪಕರಣ, ವಾಹನಗಳ ಸವಕಳಿ, ಮೋಟಾರು ವಾಹನ ತೆರಿಗೆ, ಇತರೆ ಬಳಕೆ ವಸ್ತುಗಳು ಮತ್ತು ಸ್ಥಿರ ವೆಚ್ಚಗಳಾದ ಸಿಬ್ಬಂದಿ ವೆಚ್ಚ, ಹಾಗೂ ಇತರ ವೆಚ್ಚಗಳನ್ನೊಳಗೊಂಡಂತೆ ಒಟ್ಟು ವೆಚ್ಚವು ರೂ.69.71 ಲಕ್ಷದಷ್ಟು ಆಗುತ್ತಿದ್ದು, ಪ್ರತಿ ಮಾಹೆ ಸರಾಸರಿ ರೂ.8.23 ಲಕ್ಷಗಳಷ್ಟು ನಷ್ಟವಾಗುತ್ತಿಗುತ್ತದೆ. ನಗರ ಸಾರಿಗೆಗಳನ್ನು ಸಾಮಾಜಿಕ ಬಾಧ್ಯತೆಯಡಿ ಕಾರ್ಯಾಚರಣೆ ಗೊಳಿಸುತ್ತಿದ್ದು, ನಷ್ಟದಲ್ಲಿದ್ದರೂ ಸಾರ್ವಜನಿಕ ಹಿತಾಸಕ್ತಿಗಾಗಿ ಕಾರ್ಯಾಚರಣೆ ಮಾಡಲಾಗುತ್ತಿದೆ. |
| ಆ) | ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿರುವ ವಿದ್ಯತ್ ಚಾಲಿತ ಬಸ್‌ಗಳ ಸಂಖ್ಯೆಯೆಷ್ಟು; ನಗರ ಸಾರಿಗೆಗಳಲ್ಲಿ ನಷ್ಟವನ್ನು ಸರಿದೂಗಿಸಲು ವಿದ್ಯತ್ ಚಾಲಿತ ಬಸ್‌ಗಳನ್ನು ಪ್ರಾರಂಭಿಸಲು ಸರ್ಕಾರದ ತೀರ್ಮಾನಗಳೇನು; ಯಾವ ಕಾಲಮಿತಿಯಲ್ಲಿ ಈ ವಿದ್ಯುತ್ ಚಾಲಿತ ಬಸ್‌ಗಳನ್ನು ಆರಂಭಿಸಲಾಗುವುದು? (ಮಾಹಿತಿ ಒದಗಿಸುವುದು) | ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ವಿದ್ಯುತ ಚಾಲಿತ ಬಸ್ಸುಗಳು ಇರುವುದಿಲ್ಲ. ವಿದ್ಯುತ್ ಚಾಲಿತ ಬಸ್‌ಗಳನ್ನು ಪ್ರಾರಂಭಿಸಲು ಪ್ರಸ್ತುತ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

ಸಂಖ್ಯೆ: ಟಿಡಿ 245 ಟಿಸಿಕ್ಯೂ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು

RAMALINGAREDDY
TRANSPORT & MUZRAI MINISTER
GOVERNMENT OF KARNATAKA